**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 17/2018**

**ದೋ.ಸಾ. : 9 ಪ್ರಾ.ಸಾ. : 2**

ಸಾಕ್ಷಿಯ ಹೆಸರು : ಗೀತಾ

ಗಂಡನ ಹೆಸರು : ಮಂಜುನಾಥ ಶೇಟ್

ವಯಸ್ಸು : 48 ವರ್ಷ

ಉದ್ಯೋಗ : ಹೊಲಿಗೆ ಗೃಹಿಣಿ

ವಾಸ : ಸೋನಾರಕೇರಿ , ಭಟ್ಕಳ

**ದಿನಾಂಕಃ 04-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದೋಸಾ-8 ನನ್ನ ದೊಡ್ಡಮ್ಮ. ಈಗ ಆಕೆ ಜೀವಂತ ಇಲ್ಲ. ಆಕೆಯ ಮನೆ ಮತ್ತು ನನ್ನ ಮನೆ ಭಟ್ಕಳದಲ್ಲಿ ಸೋನಾರಕೇರಿಯಲ್ಲಿ ಎದುರು ಬದರಾಗಿ ಇದೆ. ಮಧ್ಯದಲ್ಲಿ ಒಂದು ಅಂಗಳ ಇದೆ. ಆಕೆಯ ಮನೆಯಲ್ಲಿ ಜೋರಾಗಿ ಕೂಗಿಕೊಂಡರೆ ನನ್ನ ಮನೆಯಲ್ಲಿ ಕೇಳಿಸುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಪರಿಚಯ ಇದೆ. ನನ್ನ ಮನೆಯ ಪಕ್ಕದ ಕಂಪೌಂಡ್ ನಲ್ಲಿ ಆರೋಪಿ ಮನೆ ಇದೆ . ದೋಸಾ-10 ನನ್ನ ಮಗಳು .

2. ದಿನಾಂಕ 01.02.2017 ರಂದು ನಾನು ಮತ್ತು ನನ್ನ ಮಗಳು ದೋಸಾ-10 ನಮ್ಮ ಮನೆಯಲ್ಲಿ ಇದ್ದಾಗ ರಾತ್ರಿ 9.00-9.15 ಗಂಟೆಗೆ ದೋಸಾ-8 ರವರ ಮನೆಯಿಂದ ಜೋರಾಗಿ ಚೀರಿಕೊಂಡ ಶಬ್ದ ಕೇಳಿಸಿತು. ಆಗ ನಾನು ಮತ್ತು ನನ್ನ ಮಗಳು ಅಲ್ಲಿಗೆ ಓಡಿ ಹೋದೆವು . ಅಲ್ಲಿಗೆ ಹೋದಾಗ ದೋಸಾ-8 ಕೆಳಗೆ ಬಿದ್ದಿದ್ದಳು. ಒಬ್ಬ ವ್ಯಕ್ತಿ ಓಡಿ ಹೋದ ಆದರೆ ಆ ವ್ಯಕ್ತಿ ಯಾರು ಎಂದು ನಾನು ನೋಡಲಿಲ್ಲ. ಮನೆಯಲ್ಲಿ ಒಳಗೆ ಹೋಗಿ ನೋಡಿದಾಗ ದೋಸಾ-8 ರವರಿಗೆ ಪೆಟ್ಟಾಗಿ ಅಡಿಗೆ ಮನೆಯಲ್ಲಿ ಬಿದ್ದಿದ್ದಳು. ಅಲ್ಲಿ ದೋಸಾ-1 ರವರು ಇದ್ದರು. ಮಾರನೇ ದಿನ ಪೊಲೀಸ್ ನವರು ಬಂದಾಗ ನಾನು ಹೇಳಿಕೆ ಕೊಟ್ಟಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

3. ನಾನು ದೋಸಾ-8 ಮನೆ ಹತ್ತಿರ ಹೋದಾಗ ಆರೋಪಿಯೇ ದೋಸಾ-8 ರವರ ಮನೆಯಿಂದ ಓಡಿ ಹೋಗುವುದನ್ನು ನಾನು ಮತ್ತು ನನ್ನ ಮಗಳು ನೋಡಿದೆವು ಎಂದರೆ ಅದು ಆರೋಪಿ ಎಂದು ನನಗೆ ಗೊತ್ತಿಲ್ಲ ನಾನು ಓಡಿ ಹೋದ ವ್ಯಕ್ತಿಯನ್ನು ಗುರುತಿಸಿಲ್ಲ ಆದರೆ ದೋಸಾ-1 ರವರು ಓಡಿ ಹೋದ ವ್ಯಕ್ತಿ ಆರೋಪಿ ಎಂದು ಹೇಳಿದಳು. ನಾನು ಆರೋಪಿಯನ್ನು ನೋಡಿದ್ದರೂ ಅವನು ನನ್ನ ಪಕ್ಕದ ಮನೆಯವನು ಎಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯೇ ಓಡಿ ಹೋದ ವ್ಯಕ್ತಿ ಎಂದು ನಾನು ಪೊಲೀಸ್ ನವರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆ ಹೇಳಿಕೆಯನ್ನು ನಿ.ಪಿ. 5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ ಎ ಎ ರವರಿಂದ</u>**

4. ದೋಸಾ-8 ಮತ್ತು ಆರೋಪಿ ನಡುವೆ ಜಮೀನಿನ ವಿವಾದದ ಸಿವಿಲ್ ಪ್ರಕರಣ ನಡೆಯುತ್ತಿತ್ತು ಎಂದರೆ ಹೌದು . ಆ ಸಿವಿಲ್ ದಾವೆ ಇದ್ದ ಕಾರಣ ದೋಸಾ-8 ರವರು ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ದೋಸಾ-8 ರವರಿಗೆ ಯಾವುದೇ ರೀತಿ ಹಲ್ಲೆ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 01.02.2017 ರಂದು ನಾನು ಚೀರಿದ ಶಬ್ದ ಕೇಳಿ ದೋಸಾ-8 ರವರ ಮನೆಗೆ ಹೋಗಿದ್ದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ದೋಸಾ-8 ಸ್ನಾನದ ಕೋಣೆಯಲ್ಲಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿದ್ದಾಳೆ ಎಂದು ನನಗೆ ಗೊತ್ತು ಎಂದರೆ ಹೊಡೆದಿದ್ದು ಎಂದು ದೋಸಾ-1 ರವರು ನನಗೆ ಹೇಳಿದ್ದಾರೆ ಆಕೆಗೆ ಹೇಗೆ ಪೆಟ್ಟಾಯಿತು ಎಂದು ನನಗೆ ಗೊತ್ತಿಲ್ಲ. ಆರೋಪಿ ಹೊಡೆದಿದ್ದಾಗಿ ದೋಸಾ-1 ನನ್ನ ಬಳಿ ಹೇಳಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ - ಇಲ್ಲ -</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ